C.C. No.- 3753/2021
CW-1 / PW-1

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಗಂಗಾವತಿ.**

**ಸಾಕ್ಷಿಯನ್ನು ದಿನಾಂಕ- 07.10.2023 ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು- | ಶೇಖರಗೌಡ |
| ತಂದೆ / ಗಂಡನ ಹೆಸರು- | ವೀರಪ್ಪ |
| ವಯಸ್ಸು- | 40 ವರ್ಷಗಳು |
| ಉದ್ಯೋಗ- | ಒಕ್ಕಲುತನ |
| ವಾಸಸ್ಥಳ- | ಮಲ್ಲಾಪುರ |

**ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-**

ಚಾಸಾ-2 ಮತ್ತು 3 ಗೊತ್ತು. ಚಾಸಾ-4 ಮತ್ತು 5 ನನ್ನ ಸಹೋದರರು. ಚಾಸಾ-6 ನಮ್ಮ ಊರಿನವರು. ಚಾಸಾ-7 ಮತ್ತು 8 ನಮ್ಮ ಸಂಬಂದಿಕರು. ಆರೋಪಿ ಗೊತ್ತು. ಆತ ನಮ್ಮ ಊರಿನವನು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿಯು ನ್ಯಾಯಾಲಯದಲ್ಲಿ ಗೈರುಹಾಜರು ಇದ್ದು ಆತನನ್ನು ಗುರುತಿಸುವ ಬಗ್ಗೆ ತಕರಾರು ಇರುವುದಿಲ್ಲ ಎಂದು ವಿನಾಯಿತಿ ಅರ್ಜಿಯಲ್ಲಿ ತಿಳಿಸಿರುತ್ತಾರೆ. ದಿಃ 20.08.2021 ರಂದು ಬೆಳಿಗ್ಗೆ ನನಗೂ ಮತ್ತು ಆರೋಪಿಗೂ ನನ್ನ ಅಣ್ಣನ ಮಗನಾದ ಹನುಮಣ್ಣನ ಇವನ ವಿಚಾರದಲ್ಲಿ ಗಲಾಟೆ ಆಯಿತು. ಅದೇ ದಿನ ರಾತ್ರಿ 8 ಗಂಟೆಗೆ ನಾನು ಗುಡದೂರು ಮತ್ತು ಮಲ್ಲಾಪುರ ರಸ್ತೆಯ ಹತ್ತಿರ ಬಹಿರ್ದೆಸೆಗೆ ಹೋದಾಗ ದುರುದ್ದೇಶದಿಂದ ಬಂದು ನನ್ನ ತಲೆಗೆ ಕಟ್ಟಿಗೆಯಿಂದ ಹೊಡೆದ. ಆತ ಮುಂದುವರೆದು ನನಗೆ ಅವಾಚ್ಯ ಶಬ್ದಗಳಿಂದ ಬೈದು ನಿನ್ನನ್ನು ಸಾಯಿಸುತ್ತೇನೆ ಎಂದು ಹೇಳಿ ನಿನ್ನ ಕುತ್ತಿಗೆಯನ್ನು ಹಿಚುಕಿ, ಇನ್ನೊಂದು ಏಟು ಹೊಡೆದು ಹೋದ. ನಂತರ ನಾನು ಕನಕಗಿರಿಯ ಆಸ್ಪತ್ರೆಗೆ ಬಂದು ಚಿಕಿತ್ಸೆಯನ್ನು ಪಡೆದಿರುತ್ತೇನೆ. ಆಗ ನನ್ನ ಕುಟುಂಬದ ಸದಸ್ಯರು ಆಸ್ಪತ್ರೆಗೆ ಬಂದಿದ್ದರು. ಕನಕಗಿರಿಯ ಆಸ್ಪತ್ರೆಯವರು ನನ್ನನ್ನು ಗಂಗಾವತಿಯ ಆಸ್ಪತ್ರೆಗೆ ಕಳುಹಿಸಿದರು. ಗಂಗಾವತಿ ಆಸ್ಪತ್ರೆಯವರು ನನ್ನನ್ನು ಕೊಪ್ಪಳದ ಆಸ್ಪತ್ರೆಗೆ ಕಳುಹಿಸಿದರು. ನಾನು ಚಿಕಿತ್ಸೆ ಪಡೆದು ಮಾರನೇ ದಿನ ಘಟನೆ ಬಗ್ಗೆ ದೂರನ್ನು ದಾಖಲಿಸಿರುತ್ತೇನೆ. ದೂರು ದಾಖಲಿಸಿದ

ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಆಗ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

2. ದೂರು ದಾಖಲಿಸಿದ ಮಾರನೇ ದಿನ ಪೊಲೀಸರು ಘಟನೆ ಸ್ಥಳಕ್ಕೆ ಬಂದು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿದರು. ಪೊಲೀಸರು ಪಂಚನಾಮೆ ಮಾಡಿ ಒಂದು ಕಟ್ಟಿಗೆಯನ್ನು ತೆಗೆದುಕೊಂಡರು. ಸಾಕ್ಷಿಗೆ ದೂರನ್ನು ಮತ್ತು ಅದರಲ್ಲಿ ಇರುವ ತನ್ನ ಸಹಿಯನ್ನು ತೋರಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬಡಿಗೆಯನ್ನು ನೋಡಿ ಗುರುತಿಸಿ, ಅದರಿಂದಲೇ ಆರೋಪಿ ಹಲ್ಲೆ ಮಾಡಿರುತ್ತಾನೆ ಎಂದು ಹೇಳಿದ ಕಾರಣ ಅದನ್ನು ಎಮ್ ಒ 1 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು- ಶ್ರೀ ಬಿ ಎನ್ ಎನ್ ಆರೋಪಿತರ ಪರ ವಕೀಲರಿಂದ-</u>**

3. ನನಗೆ ಸಂಪೂರ್ಣವಾಗಿ ಓದಲು ಬರುವುದಿಲ್ಲ. ದೂರನ್ನು ನಾನು ಓದಿರುತ್ತೇನೆ. ದಿನಾಂಕ 20.08.2021 ರಂದು ಆರೋಪಿ ಮತ್ತು ನನ್ನ ಅಣ್ಣನ ಮಗನ ವಿಚಾರದಲ್ಲಿ ಗಲಾಟೆ ಆದ ಬಗ್ಗೆ ದೂರಲ್ಲಿ ತಿಳಿಸಿರುತ್ತೇನೆ. ಘಟನೆ ನಡೆದಾಗ ನಾನು ಪಶ್ಚಿಮ ದಿಕ್ಕಿಗೆ ಇರುವ ರಸ್ತೆಯಲ್ಲಿ ಬಹಿರ್ದೆಸೆಗೆ ಹೋಗಿದ್ದೆ. ಆ ದಿನ ಆ ರಸ್ತೆಯಲ್ಲಿ ಯಾವ ಜನರು ಓಡಾಡುತ್ತಿರಲಿಲ್ಲ. ಅಲ್ಲಿ ಯಾವುದೇ ಲೈಟಿನ ಬೆಳಕು ಇರಲಿಲ್ಲ. ಅಲ್ಲಿ ಕಗ್ಗತ್ತು ಇತ್ತು. ಅಲ್ಲಿ ಯಾವುದಾದರೂ ವ್ಯಕ್ತಿ ಬಂದರೆ ಕಾಣುತ್ತಿದ್ದರು. ಇಬ್ಬರು ವ್ಯಕ್ತಿಗಳು ಕಾಣಬೇಕಾದರೆ ಬೆಳಕು ಇರಬೇಕೆಂದರೆ ನಿಜ. ಆ ದಿನ ಅಕ್ಕ ಪಕ್ಕದ ಹೊಲದಲ್ಲಿ ಕೆಲಸ ಮಾಡುತ್ತಿದ್ದವರು ಕಾಣಲಿಲ್ಲ. ಆರೋಪಿ ಎಮ್ ಒ 1 ನ್ನು ತನ್ನ ಜೊತೆ ಹಿಡಿದುಕೊಂಡು ಬಂದಿದ್ದ. ಆತ ಅದನ್ನು ಹಿಡಿದುಕೊಂಡು ಬಂದಿರುತ್ತಾನೆ ಎಂದು ಪೊಲೀಸರಿಗೆ ಹೇಳಿ ಬರೆಸಿರುತ್ತೇನೆ. ಆರೋಪಿ ಪಶ್ಚಿಮ ದಿಕ್ಕಿನ ಕಡೆಗೆ ಬರುತ್ತಿದ್ದ. ಆರೋಪಿ ಎಮ್ ಒ 1 ನ್ನು ತೆಗೆದುಕೊಂಡು ಹಲ್ಲೆ ಮಾಡಿದಾಗ ನನ್ನ ತಲೆಯಿಂದ ರಕ್ತ ಬಂದಿರುತ್ತದೆ. ರಕ್ತ ನನ್ನ ಬಟ್ಟೆಯ ಮೇಲೆ ಬಿದ್ದಿರುತ್ತದೆ. ಬಟ್ಟೆಯನ್ನು

ಪೊಲೀಸರು ಕೇಳಿದರೂ ಸಹ ನಾನು ಅವರಿಗೆ ನೀಡಲಿಲ್ಲ. ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದಾಗ ನಾನು ನಿಂತುಕೊಂಡಿದ್ದೆ. ನೆಲದ ಮೇಲೆ ರಕ್ತ ಬಿದ್ದಿರುತ್ತದೆಯೇ ಎಂದರೆ ಸಾಕ್ಷಿಯು ಬಿದ್ದಿರಬಹುದು ನಾನು ನೋಡಲಿಲ್ಲ ಎಂದು ನುಡಿಯುತ್ತಾರೆ. ನಾನು ಪೊಲೀಸರಿಗೆ ಹಲ್ಲೆ ಮಾಡಿದ ಸ್ಥಳವನ್ನು ತೋರಿಸಿರುತ್ತೇನೆ. ಆದರೆ ಸ್ಥಳದಲ್ಲಿ ಬಿದ್ದಿರಬಹುದು ಎಂದು ಹೇಳಿದ ರಕ್ತವನ್ನು ತೋರಿಸಿಲ್ಲ. ನನ್ನ ಅಣ್ಣ ತಮ್ಮಂದಿರು ನನ್ನನ್ನು ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಚಾಸಾ-4, 5, 7 ಮತ್ತು 8 ಬಂದು ನನ್ನನ್ನು ಆಸ್ಪತ್ರೆಗೆ ದಾಖಲಿಸಿದರು. ನಾನು ಆಸ್ಪತ್ರೆಗೆ ಹೋದಾಗ ಎಷ್ಟು ಗಂಟೆ ಆಗಿತ್ತು ಎಂದು ತಿಳಿದುಕೊಳ್ಳಲಿಲ್ಲ. ಆರೋಪಿ ನನ್ನ ಮೇಲೆ ಹಲ್ಲೆ ಮಾಡುವ ಮೊದಲೇ ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದ. ಆ ದಿನ ಆರೋಪಿ ನನಗೆ ಹಲ್ಲೆ ಮಾಡಿರುತ್ತಾನೆ ಎಂದು ಹೇಳಿದ ಸಮಯದಲ್ಲಿ ನನ್ನ ಕುತ್ತಿಗೆ ಹತ್ತಿರ ಯಾವುದೇ ಗಾಯ ಮತ್ತು ಬಾವು ಆಗಿರಲಿಲ್ಲ. ಆರೋಪಿ ನನ್ನ ಮೇಲೆ ಕಟ್ಟಿಗೆಯಿಂದ ಹಲ್ಲೆ ಮಾಡಿದ ಮೇಲೆ ನಾನು ಕೂಗಿಕೊಂಡಿರುತ್ತೇನೆ. ನಾನು ಸರಕಾರಿ ಆಸ್ಪತ್ರೆಯಲ್ಲಿ ಕೇವಲ ಒಂದೇ ದಿನ ಇದ್ದೆ. ನಾನು ಕೊಪ್ಪಳ ಆಸ್ಪತ್ರೆಯಿಂದ ಬಿಡುಗಡೆಗೊಂಡು ಸಂಜೆ 5-6 ಗಂಟೆಗೆ ಕನಕಗಿರಿಗೆ ಹೋಗಿರುತ್ತೇನೆ ಮತ್ತು ಅದೇ ದಿನ ರಾತ್ರಿ 10 ಗಂಟೆಗೆ ನಾನು ಮನೆಗೆ ಬಂದಿರುತ್ತೇನೆ.

(ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಗಂಗಾವತಿ.